**ಶ್ರೀ ಗಣೇಶ ಶಾರದ ಗುರುಭ್ಯೋ ನಮಃ**

# ಶ್ರೀ ಕಾಲಟಿ ದಿವ್ಯ ಕ್ಷೇತ್ರ ದರ್ಶನ

ಕಾಲಟಿ - ಪಾದದ ಗುರುತು. ಬಾಲ ಶಂಕರರ ಪುಟ್ಟ ಪುಟ್ಟ ಹೆಜ್ಜೆಯ ಗುರುತು.

ಹನ್ನೆರಡು ಶತಮಾನಗಳಾದರೂ ಅಚ್ಚಳಿಯದ ಗುರುತು.

ನಾಸ್ತಿಕ ಭಾವನೆಗಳು ಬಲಿಯುತ್ತಾ ಬಂದು, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳು ಕುಸಿಯುತ್ತಿದ್ದಾಗ ಲೋಕ ತಾರಕವಾದ ಸನಾತನ ಧರ್ಮವನ್ನು ಉತ್ಥಾನಗೊಳಿಸಿದ ಅದ್ವೈತ ದುಂದುಭಿಯ ಗುರುತು.

ಕ್ಷೇತ್ರರಾಜ - ಕಾಲಟಿ.

ಜಗದ್ಗುರು ಶ್ರೀಶಂಕರ ಭಗವತ್ಪಾದಾಚಾರ್ಯರ ಜನ್ಮಭೂಮಿ - ಪುಣ್ಯಭೂಮಿ. ದೇವರ ಸ್ವಂತ ನಾಡೆಂದೇ ಪ್ರಖ್ಯಾತವಾಗಿರುವ ಕೇರಳದ ಪೂರ್ಣಾನದಿಯ ತೀರದಲ್ಲಿರುವ ಅಗ್ರಹಾರ.

ಶಂಕರ ಭಗವತ್ಪಾದರು ಬಾಲ್ಯದಲ್ಲಿ ಅತ್ಯದ್ಭುತ ಶಕ್ತಿಗಳನ್ನು ಪ್ರಕಟಿಸಿದ ಕಾಲಟಿಯ ದರ್ಶನ ಭಾಗ್ಯ, ಜನ್ಮ ಜನ್ಮದ ಪುಣ್ಯಫಲ.

ಶಂಕರರ ಜನನ, ಶಂಕರರ ಚೂಡಾಕರ್ಮ, ಶಂಕರರ ಉಪನಯನ ಸಂಸ್ಕಾರ, ಶಂಕರರ ವೇದಾಧ್ಯಯನ, ಶಂಕರರ ಆತುರ ಸನ್ಯಾಸ ಸ್ವೀಕಾರ ಮುಂತಾದುವುಗಳ ಸಾಕ್ಷಿ - ಕಾಲಟಿ.

ಕಾಲಟಿಯ ಮಹಾದ್ವಾರ ಸಾಕ್ಷಾತ್ ಭೂಕೈಲಾಸದ ದ್ವಾರ.



ಕೈಲಾಸ ಪರ್ವತದಲ್ಲಿ ಇರುವ ದಿವ್ಯಾನುಭೂತಿ ನೀಡುವ ಪರಿಸರ. ಯೋಗಭಂಗಿಯಲ್ಲಿ ತಪಸ್ಸಿನಲ್ಲಿ ಕುಳಿತಿರುವ ಶಂಕರ ಮಹಾದೇವನ ಸಾಕ್ಷಾತ್ಕಾರ. ಶಿವಗುರು ಮತ್ತು ಆರ್ಯಾಂಬೆಯರಿಗೆ ಪುತ್ರಪ್ರಾಪ್ತಿಯ ಅನುಗ್ರಹ ನೀಡಿದ ವೃಷಾಚಲೇಶ್ವರ. ಶಂಕರಭಗವತ್ಪಾದರಂತಹ ಅದ್ವಿತೀಯ ತತ್ತ್ವಜ್ಞಾನಿ, ವಾಗ್ಮಿ, ಶ್ರೇಷ್ಠಕವಿಗಳನ್ನು ಈ ಧರೆಗೆ ಕಳುಹಿಸಿದ, ಅಲ್ಲ ಅಲ್ಲ ಸಾಕ್ಷಾತ್ ತನ್ನ ಅಂಶದಲ್ಲಿ ಅವರ ರೂಪದಲ್ಲಿ ಧರೆಗೆ ಇಳಿದ ಕೃಪಾಸಾಗರ.



ಈಗ ಶಂಕರ ಭಗವತ್ಪಾದರ ಕೃತಿ, ಮಹಾದೇವ ಶಂಕರನ ಶಿವ ಪಂಚಾಕ್ಷರೀ ಸ್ತೋತ್ರ.

**ನಾಗೇಂದ್ರಹಾರಾಯ ತ್ರಿಲೋಚನಾಯ ಭಸ್ಮಾಂಗರಾಗಾಯ ಮಹೇಶ್ವರಾಯ ।**

**ನಿತ್ಯಾಯ ಶುದ್ಧಾಯ ದಿಗಂಬರಾಯ ತಸ್ಮೈ "ನ" ಕಾರಾಯ ನಮಃ ಶಿವಾಯ ॥**

**ಮಂದಾಕಿನೀ ಸಲಿಲ ಚಂದನ ಚರ್ಚಿತಾಯ**

**ನಂದೀಶ್ವರ ಪ್ರಮಥನಾಥ ಮಹೇಶ್ವರಾಯ ।**

**ಮಂದಾರ ಮುಖ್ಯ ಬಹುಪುಷ್ಪ ಸುಪೂಜಿತಾಯ**

**ತಸ್ಮೈ "ಮ" ಕಾರಾಯ ನಮಃ ಶಿವಾಯ ॥**

**ಶಿವಾಯ ಗೌರೀ ವದನಾಬ್ಜ ಬೃಂದಸೂರ್ಯಾಯ ದಕ್ಷಾಧ್ವರ ನಾಶಕಾಯ ।**

**ಶ್ರೀ ನೀಲಕಂಠಾಯ ವೃಷಭಧ್ವಜಾಯ ತಸ್ಮೈ "ಶಿ" ಕಾರಾಯ ನಮಃ ಶಿವಾಯ ॥**

**ವಶಿಷ್ಠ ಕುಂಭೋದ್ಭವ ಗೌತಮಾರ್ಯ ಮುನೀಂದ್ರ ದೇವಾರ್ಚಿತ ಶೇಖರಾಯ ।**

**ಚಂದ್ರಾರ್ಕ ವೈಶ್ವಾನರ ಲೋಚನಾಯ ತಸ್ಮೈ "ವ" ಕಾರಾಯ ನಮಃ ಶಿವಾಯ ॥**

**ಯಜ್ಞ-ಸ್ವರೂಪಾಯ ಜಟಾಧರಾಯ ಪಿನಾಕ ಹಸ್ತಾಯ ಸನಾತನಾಯ ।**

**ದಿವ್ಯಾಯ ದೇವಾಯ ದಿಗಂಬರಾಯ ತಸ್ಮೈ "ಯ" ಕಾರಾಯ ನಮಃ ಶಿವಾಯ ॥**

**ಪಂಚಾಕ್ಷರಮಿದಂ ಪುಣ್ಯಂ ಯಃ ಪಠೇಚ್ಛಿವ ಸನ್ನಿಧೌ ।**


**ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೇ ॥**

ಸುಮಾರು ನೂರು ವರ್ಷಗಳ ಹಿಂದೆ ಸನಾತನ ಧರ್ಮಕ್ಕೇ ಗ್ಲಾನಿಯೊದಗಿದ್ದ ಅತ್ಯಂತ ವಿಪ್ಲವ ಸಮಯ. ಸನಾತನ ಧರ್ಮವನ್ನು ಉದ್ಧಾರ ಮಾಡಿದ ಮಹಾತ್ಮರ ಜನ್ಮಸ್ಥಳವೇ ಅನ್ಯ ಮತೀಯರ ವಶ. ಈ ಪುಣ್ಯಭೂಮಿಯನ್ನು ಮರಳಿ ಪಡೆದು ಅಲ್ಲೇ ಆ ಪವಿತ್ರ ನೆಲದಲ್ಲೇ ಶ್ರೀ ಶಂಕರ ಭಗವತ್ಪಾದರ ದಿವ್ಯಸ್ಮರಣೆ ಅನುದಿನವೂ ಅನುಕ್ಷಣವೂ ಉಂಟಾಗುವಂತೆ ಮಾಡಿದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳ ಧೃಢ ಸಂಕಲ್ಪದ ಫಲ ಕಾಲಟಿಯ ದರ್ಶನ ಭಾಗ್ಯದ ಲಾಭ.



ಸನಾತನ ಧರ್ಮಾವಲಂಬಿಗಳಾದ ಪ್ರತಿಯೊಬ್ಬರೂ ಕಾಶೀ ರಾಮೇಶ್ವರಗಳಂತೇ ತಮ್ಮ ಜೀವಮಾನದಲ್ಲಿ ಒಮ್ಮೆಯಾದರೂ ಈ ಪುಣ್ಯಕ್ಷೇತ್ರವಾದ ಕಾಲಟಿಗೆ ಬಂದು, ಶ್ರೀಶಾರದಾಂಬೆಯನ್ನೂ ಶ್ರೀಶಂಕರ ಭಗವತ್ಪಾದರನ್ನೂ ದರ್ಶಿಸಿ, ಶ್ರೀ ಶಂಕರ ಭಗವತ್ಪಾದರ ಉಪದೇಶವನ್ನು ಜೀವನದಲ್ಲಿ ಪರಿಪಾಲಿಸಬೇಕೆಂಬ ಗುರುಗಳ ಅಪ್ಪಣೆಯಂತೆ ನಡೆದುಕೊಂಡ ಧನ್ಯತಾ ಭಾವ.

ದೇಗುಲದ ಮಹಾದ್ವಾರದಲ್ಲಿ ಕನಕಧಾರಾ ವರ್ಷದ ಸುಂದರ ತೈಲವರ್ಣ ಚಿತ್ರ.



ಲಕ್ಷ್ಮೀ ಪ್ರಸಾದಾನಂದಿತ ದ್ವಿಜಾಯ ನಮಃ ।

ದೀನಳೂ ಸಾಧ್ವಿಯೂ ಆಗಿದ್ದ ಗೃಹಿಣಿಯಲ್ಲಿ ಶಂಕರ ಭಗವತ್ಪಾದರು ಕರುಣೆ ತೋರಿ, ನಿಶ್ಚಲ ಮುಗ್ಧ ಭಕ್ತಿಯಿಂದ ಲಕ್ಷ್ಮೀ ದೇವಿಯನ್ನು ಪ್ರಸನ್ನ ಮಾಡಿಕೊಂಡು, ಬಂಗಾರದ ನೆಲ್ಲಿಕಾಯಿಗಳ ಸುರಿಮಳೆಯಾಗುವಂತೆ ಮಾಡಿ, ತದನಂತರ ಯಾರು ಈ ಸ್ತೋತ್ರದಿಂದ ಪ್ರತಿದಿನವೂ ತ್ರಿಲೋಕಮಾತೆ

ಲಕ್ಷ್ಮಿಯನ್ನು ಸ್ತುತಿಸುತ್ತಾರೋ, ಅವರೆಲ್ಲರೂ ಸದ್ಗುಣಿಗಳಾಗಿ ವಿಶೇಷ ಸಂಪತ್ತನ್ನು ಪಡೆದು, ದೇವಿಯ ಕರುಣಾಪೂರಿತ ಕೃಪಾಕಟಾಕ್ಷವನ್ನು ಪಡೆಯುವ ಭಾಗ್ಯದ ನಿಧಿ ಎಂದು ಶಂಕರ ಭಗವತ್ಪಾದರಿಂದಲೇ ಫಲಶ್ರುತಿ ಹೇಳಲ್ಪಟ್ಟ ಕನಕಧಾರಾ ಸ್ತೋತ್ರ.

**ವಂದೇ ವಂದಾರು ಮಂದಾರಮಿಂದಿರಾನಂದಕಂದಲಮ್ ।**

**ಅಮಂದಾನಂದಸಂದೋಹ ಬಂಧುರಂ ಸಿಂಧುರಾನನಮ್ ॥**

**ಅಂಗಂ ಹರೇಃ ಪುಲಕಭೂಷಣಮಾಶ್ರಯಂತೀ**
**ಭೃಂಗಾಂಗನೇವ ಮುಕುಳಾಭರಣಂ ತಮಾಲಮ್ ।**
**ಅಂಗೀಕೃತಾಖಿಲವಿಭೂತಿರಪಾಂಗಲೀಲಾ**
**ಮಾಂಗಳ್ಯದಾಸ್ತು ಮಮ ಮಂಗಳದೇವತಾಯಾಃ ॥ 1 ॥**

**ಮುಗ್ಧಾ ಮುಹುರ್ವಿದಧತೀ ವದನೇ ಮುರಾರೇಃ**
**ಪ್ರೇಮತ್ರಪಾಪ್ರಣಿಹಿತಾನಿ ಗತಾಗತಾನಿ ।**
**ಮಾಲಾ ದೃಶೋರ್ಮಧುಕರೀವ ಮಹೋತ್ಪಲೇ ಯಾ**
**ಸಾ ಮೇ ಶ್ರಿಯಂ ದಿಶತು ಸಾಗರಸಂಭವಾಯಾಃ ॥ 2 ॥**

**ಆಮೀಲಿತಾಕ್ಷಮಧಿಗಮ್ಯ ಮುದಾ ಮುಕುಂದಂ-**
**ಆನಂದಕಂದಮನಿಮೇಷಮನಂಗತಂತ್ರಮ್ ।**
**ಆಕೇಕರಸ್ಥಿತಕನೀನಿಕಪಕ್ಷ್ಮನೇತ್ರಂ**
**ಭೂತ್ಯೈ ಭವೇನ್ಮಮ ಭುಜಂಗಶಯಾಂಗನಾಯಾಃ ॥ 3 ॥**

**ಬಾಹ್ವಂತರೇ ಮಧುಜಿತಃ ಶ್ರಿತಕೌಸ್ತುಭೇ ಯಾ**
**ಹಾರಾವಳೀವ ಹರಿನೀಲಮಯೀ ವಿಭಾತಿ ।**
**ಕಾಮಪ್ರದಾ ಭಗವತೋಽಪಿ ಕಟಾಕ್ಷಮಾಲಾ**
**ಕಲ್ಯಾಣಮಾವಹತು ಮೇ ಕಮಲಾಲಯಾಯಾಃ ॥ 4 ॥**

**ಕಾಲಾಂಬುದಾಳಿಲಲಿತೋರಸಿ ಕೈಟಭಾರೇಃ**
**ಧಾರಾಧರೇ ಸ್ಫುರತಿ ಯಾ ತಟಿದಂಗನೇವ ।**
**ಮಾತುಸ್ಸಮಸ್ತಜಗತಾಂ ಮಹನೀಯಮೂರ್ತಿಃ**
**ಭದ್ರಾಣಿ ಮೇ ದಿಶತು ಭಾರ್ಗವನಂದನಾಯಾಃ ॥ 5 ॥**

ಪ್ರಾಪ್ತಂ ಪದಂ ಪ್ರಥಮತಃ ಖಲು ಯತ್ಪ್ರಭಾವಾತ್
ಮಾಂಗಳ್ಯಭಾಜಿ ಮಧುಮಾಥಿನಿ ಮನ್ಮಥೇನ ।
ಮಯ್ಯಾಪತೇತ್ತದಿಹ ಮಂಥರಮೀಕ್ಷಣಾರ್ಧಂ
ಮಂದಾಲಸಂ ಚ ಮಕರಾಲಯಕನ್ಯಕಾಯಾಃ ॥ 6 ॥
ವಿಶ್ವಾಮರೇಂದ್ರಪದವಿಭ್ರಮದಾನದಕ್ಷಂ
ಆನಂದಹೇತುರಧಿಕಂ ಮುರವಿದ್ವಿಷೋಽಪಿ ।
ಈಷನ್ನಿಷೀದತು ಮಯಿ ಕ್ಷಣಮೀಕ್ಷಣಾರ್ಧಂ
ಇಂದೀವರೋದರಸಹೋದರಮಿಂದಿರಾಯಾಃ ॥ 7 ॥
ಇಷ್ಟಾ ವಿಶಿಷ್ಟಮತಯೋಽಪಿ ಯಯಾ ದಯಾರ್ದ್ರ
ದೃಷ್ಟ್ಯಾ ತ್ರಿವಿಷ್ಟಪಪದಂ ಸುಲಭಂ ಲಭಂತೇ ।
ದೃಷ್ಟಿಃ ಪ್ರಹೃಷ್ಟ ಕಮಲೋದರದೀಪ್ತಿರಿಷ್ಟಾಂ
ಪುಷ್ಟಿಂ ಕೃಷೀಷ್ಟ ಮಮ ಪುಷ್ಕರವಿಷ್ಟರಾಯಾಃ ॥ 8 ॥
ದದ್ಯಾದ್ದಯಾನುಪವನೋ ದ್ರವಿಣಾಂಬುಧಾರಾಮಸ್ಮಿನ್ನ ಕಿಂಚನ ವಿಹಂಗಶಿಶೌವಿಷಣ್ಣೇ।
ದುಷ್ಕರ್ಮಘರ್ಮಮಪನೀಯ ಚಿರಾಯ ದೂರಂ
ನಾರಾಯಣಪ್ರಣಯಿನೀನಯನಾಂಬುವಾಹಃ ॥ 9 ॥
ಗೀರ್ದೇವತೇತಿ ಗರುಡಧ್ವಜಸುಂದರೀತಿ ಶಾಕಂಭರೀತಿ ಶಶಿಶೇಖರವಲ್ಲಭೇತಿ ।
ಸೃಷ್ಟಿಸ್ಥಿತಿಪ್ರಳಯಕೇಲಿಷು ಸಂಸ್ಥಿತಾಯೈ
ತಸ್ಯೈ ನಮಸ್ತ್ರಿಭುವನೈಕಗುರೋಸ್ತರುಣ್ಯೈ ॥ 10 ॥
ಶ್ರುತ್ಯೈ ನಮೋಽಸ್ತು ಶುಭಕರ್ಮಫಲಪ್ರಸೂತ್ಯೈ
ರತ್ಯೈ ನಮೋಽಸ್ತು ರಮಣೀಯಗುಣಾರ್ಣವಾಯೈ ।
ಶಕ್ತ್ಯೈ ನಮೋಽಸ್ತು ಶತಪತ್ರನಿಕೇತನಾಯೈ
ಪುಷ್ಟ್ಯೈ ನಮೋಽಸ್ತು ಪುರುಷೋತ್ತಮವಲ್ಲಭಾಯೈ ॥ 11 ॥
ನಮೋಽಸ್ತು ನಾಳೀಕನಿಭಾನನಾಯೈ ನಮೋಽಸ್ತು ದುಗ್ಧೋದಧಿಜನ್ಮಭೂಮ್ಯೈ ।
ನಮೋಽಸ್ತು ಸೋಮಾಮೃತಸೋದರಾಯೈ
ನಮೋಽಸ್ತು ನಾರಾಯಣವಲ್ಲಭಾಯೈ ॥ 12 ॥

ನಮೋಽಸ್ತು ಹೇಮಾಂಬುಜಪೀಠಿಕಾಯೈ

ನಮೋಽಸ್ತು ಭೂಮಂಡಲನಾಯಿಕಾಯೈ ।

ನಮೋಽಸ್ತು ದೇವಾದಿದಯಾಪರಾಯೈ

ನಮೋಽಸ್ತು ಶಾರಂಗಾಯುಧವಲ್ಲಭಾಯೈ ॥ 13 ॥

ನಮೋಽಸ್ತು ದೇವ್ಯೈ ಭೃಗುನಂದನಾಯೈ

ನಮೋಽಸ್ತು ವಿಷ್ಣೋರುರಸಿಸ್ಥಿತಾಯೈ ।

ನಮೋಽಸ್ತು ಲಕ್ಷ್ಮ್ಯೈ ಕಮಲಾಲಯಾಯೈ

ನಮೋಽಸ್ತು ದಾಮೋದರವಲ್ಲಭಾಯೈ ॥ 14 ॥

ನಮೋಽಸ್ತು ಕಾಂತ್ಯೈ ಕಮಲೇಕ್ಷಣಾಯೈ

ನಮೋಽಸ್ತು ಭೂತ್ಯೈ ಭುವನಪ್ರಸೂತ್ಯೈ ।

ನಮೋಽಸ್ತು ದೇವಾದಿಭಿರರ್ಚಿತಾಯೈ

ನಮೋಽಸ್ತು ನಂದಾತ್ಮಜವಲ್ಲಭಾಯೈ ॥ 15 ॥

ಸಂಪತ್ಕರಾಣಿ ಸಕಲೇಂದ್ರಿಯನಂದನಾನಿ

ಸಾಮ್ರಾಜ್ಯದಾನವಿಭವಾನಿ ಸರೋರುಹಾಕ್ಷಿ ।

ತ್ವದ್ವಂದನಾನಿ ದುರಿತೋದ್ಧರಣೋದ್ಯತಾನಿ

ಮಾಮೇವ ಮಾತರನಿಶಂ ಕಲಯಂತು ಮಾನ್ಯೇ ॥ 16 ॥

ಯತ್ಕಟಾಕ್ಷಸಮುಪಾಸನಾವಿಧಿಃ ಸೇವಕಸ್ಯ ಸಕಲಾರ್ಥಸಂಪದಃ ।

ಸಂತನೋತಿ ವಚನಾಂಗಮಾನಸೈಃ

ತ್ವಾಂ ಮುರಾರಿಹೃದಯೇಶ್ವರೀಂ ಭಜೇ ॥ 17 ॥

ಸರಸಿಜನಿಲಯೇ ಸರೋಜಹಸ್ತೇ ಧವಳತಮಾಂಶುಕಗಂಧಮಾಲ್ಯಶೋಭೇ ।

ಭಗವತಿ ಹರಿವಲ್ಲಭೇ ಮನೋಜ್ಞೇ ತ್ರಿಭುವನಭೂತಿಕರಿ ಪ್ರಸೀದ ಮಹ್ಯಮ್ ॥ 18 ॥

ದಿಗ್ಘಸ್ತಿಭಿಃ ಕನಕಕುಂಭಮುಖಾವಸೃಷ್ಟ

ಸ್ವರ್ವಾಹಿನೀ ವಿಮಲಚಾರುಜಲಪ್ಲುತಾಂಗೀಮ್ ।

ಪ್ರಾತರ್ನಮಾಮಿ ಜಗತಾಂ ಜನನೀಮಶೇಷ

ಲೋಕಾಧಿನಾಥ-ಗೃಹಿಣೀಂ-ಅಮೃತಾಬ್ಧಿಪುತ್ರೀಮ್ ॥ 19 ॥

**ಕಮಲೇ ಕಮಲಾಕ್ಷವಲ್ಲಭೇ ತ್ವಂ ಕರುಣಾಪೂರತರಂಗಿತೈರಪಾಂಗೈಃ ।**

**ಅವಲೋಕಯ ಮಾಮಕಿಂಚನಾನಾಂ**

**ಪ್ರಥಮಂ ಪಾತ್ರಮಕೃತ್ರಿಮಂ ದಯಾಯಾಃ ॥ 20 ॥**

**ಸ್ತುವಂತಿ ಯೇ ಸ್ತುತಿಭಿರಮೂಭಿರನ್ವಹಂ**

**ತ್ರಯೀಮಯೀಂ ತ್ರಿಭುವನಮಾತರಂ ರಮಾಮ್ ।**

**ಗುಣಾಧಿಕಾ ಗುರುತರ-ಭಾಗ್ಯ-ಭಾಗಿನೋ**

**ಭವಂತಿ ತೇ ಭುವಿ ಬುಧಭಾವಿತಾಶಯಾಃ ॥ 21 ॥**

**ಸುವರ್ಣಧಾರಾಸ್ತೋತ್ರಂ ಯಚ್ಛಂಕರಾಚಾರ್ಯ ನಿರ್ಮಿತಮ್ ।**

**ತ್ರಿಸಂಧ್ಯಂ ಯಃ ಪಠೇನ್ನಿತ್ಯಂ ಸ ಕುಬೇರಸಮೋ ಭವೇತ್ ॥**

ದೇಗುಲದ ಸಂಕೀರ್ಣದ ಬಲಗಡೆ ಝುಳು ಝುಳು ಹರಿಯುತ್ತಿರುವ ಪೂರ್ಣಾನದಿಯ ಪ್ರಖ್ಯಾತ ಮೊಸಳೆ ಘಟ್ಟ. ಶ್ರೀ ಶ್ರೀ ಸಚ್ಚಿದಾನಂದ ನೃಸಿಂಹ ಭಾರತಿಗಳ ಕೃಪೆಯಿಂದ ಪುನರುತ್ಥಾನಗೊಂಡ ಭದ್ರವೂ ಎತ್ತರವೂ ಆದಂತಹ ಸೋಪಾನದಿಂದ ಕಂಗೊಳಿಸುತ್ತಿರುವ ಪೂರ್ಣಾನದಿ. ಶಂಕರರ ವಿನ್ನಪವನ್ನು ಮನ್ನಿಸಿ ತನ್ನ ಪಥವನ್ನು ಬದಲಾಯಿಸಿ ಮಾತೆ ಆರ್ಯಾಂಬೆಗೆ ಸಂತಸವನ್ನಿತ್ತ ಪೂರ್ಣೆ.







ಶಂಕರರು ಆತುರ ಸನ್ಯಾಸ ಸ್ವೀಕರಿಸಿದ ಪುಣ್ಯಘಟ್ಟ.

ಪೂರ್ಣಾನದಿಯ ನೀರು ದಿವ್ಯತೀರ್ಥ. ತೀರದ ಮರಳು ಮೃತ್ತಿಕೆಯೆಂದೇ ತಿಳಿದವರ ಪ್ರಗಾಢ ನಂಬಿಕೆ. ಕಲ್ಮಷ ನಿವಾರಿಣಿ ಪೂರ್ಣೆಯ ಜಲ ಪ್ರೋಕ್ಷಣೆಯಿಂದ ಆದ ನಿರ್ಮಲ ಅನುಭವ ಅನಿರ್ವಚನೀಯ.

ಪೂರ್ಣೆಯಲ್ಲಿ ಪಾಪಗಳನ್ನು ತೊಳೆದು ಶಿವಗುರುಗಳು, ಆರ್ಯಾಂಬೆ, ಶಂಕರರು ಪೂಜಿಸುತ್ತಿದ್ದ ಶ್ರೀಕೃಷ್ಣನ ದೇಗುಲದೆಡೆ ಪಯಣ. ದೇಗುಲದ ಎರಡೂ ಕಡೆ ಆತುರ ಸನ್ಯಾಸದ ಮತ್ತು ಶ್ರೀಕೃಷ್ಣ ದೇಗುಲದ ಪುನರುತ್ಥಾನ ಸನ್ನಿವೇಶಗಳ ಸುಂದರ ವರ್ಣ ಚಿತ್ರಗಳು. ಮಣ್ಣನ್ನು ತಿನ್ನಬೇಡವೆಂಬ ಯಶೋದೆಗೆ ಬಾಯಲ್ಲಿ ಹದಿನಾಲ್ಕು ಲೋಕಗಳನ್ನು ತೋರಿಸಿದ ಜಗದೋದ್ಧಾರ ಪೂರ್ಣಾನದಿಯ ತೀರದಲ್ಲಿ.



**ಯದಾ ಧರ್ಮಗ್ಲಾನಿರ್ಭವತಿ ಜಗತಾಂ ಕ್ಷೋಭಕರಣೇ ।**

**ತದಾ ಲೋಕಸ್ವಾಮೀ ಪ್ರಕಟಿತವಪುಃ ಸೇತುದೃಗಜಃ ॥**

**ಸತಾಂ ಧಾತಾ ಸ್ವಚ್ಛೋ ನಿಗಮಗಣಗೀತೋ ವ್ರಜಪತಿಃ ।**

**ಶರಣ್ಯೋ ಲೋಕೇಶೋ ನಮ ಭವತು ಕೃಷ್ಣೋಕ್ಷಿ ವಿಷಯಃ ॥**

ಶ್ರೀಶಂಕರ ಭಗವತ್ಪಾದರ ದೃಷ್ಟಿಯ ವಿಷಯವಾದ ಶ್ರೀಕೃಷ್ಣ. ಬಾಲ್ಯದಿಂದ ಶಂಕರರು ಅರ್ಚನೆ ಮಾಡುತ್ತಿದ್ದ ಶ್ರೀಕೃಷ್ಣ. ಪೂರ್ಣಾನದಿಯನ್ನು ಶಂಕರರ ಮನೆಯ ಆಸುಪಾಸಿನಲ್ಲೇ ಹರಿಯುವಂತೆ ಮಾಡಿದ ಶ್ರೀಕೃಷ್ಣ. ಬಳಲುತ್ತಿದ್ದ ಮಾತೆಗಾಗಿ ಪೂರ್ಣಾನದಿಯು ತನ್ನ ಪಾತ್ರವನ್ನೇ ಬದಲಾಯಿಸುವಂತಹ ವರವನ್ನು ಶಂಕರರಿಗೆ ನೀಡಿದ ಶ್ರೀಕೃಷ್ಣನ ದೇವಸ್ಥಾನ. ಪೂರ್ಣೆಯ ಪ್ರವಾಹದಲ್ಲಿ ಸಿಲುಕದಂತೆ ಶಂಕರರು ಸ್ಥಳಾಂತರಿಸಿದ ಶ್ರೀಕೃಷ್ಣನ ದೇಗುಲ. ಶಂಕರರಿಂದಲೇ ಸ್ವಯಂ ಸ್ಥಾಪಿತವಾದ ಮುದ್ದು ಕೃಷ್ಣ ಶ್ರೀಗಂಧದ ಲೇಪನದಲ್ಲಿ ಶ್ರೀಕೃಷ್ಣ ಪರಮಾತ್ಮನ ಸುಂದರ ಹಸನ್ಮುಖ. ಕುಂಡಲಗಳ ಪ್ರಭೆ ಪ್ರತಿಫಲಿಸುತ್ತಿರುವ ಗಲ್ಲ. ಅನಂತ ಸೂರ್ಯ ಪ್ರಕಾಶನ ಮಂಗಲಮಯ ಸ್ವರೂಪ.



ದೇಗುಲದ ಒಳಗೆ ಪ್ರದಕ್ಷಿಣೆ ಮಾಡುತ್ತಾ ಶ್ರೀಶಂಕರ ಭಗವತ್ಪಾದ ವಿರಚಿತ ಶ್ರೀಕೃಷ್ಣ ಸ್ತೋತ್ರ.

**ಭಜೇ ವ್ರಜೈಕಮಂಡನಂ ಸಮಸ್ತಪಾಪಖಂಡನಂ**

**ಸ್ವಭಕ್ತಚಿತ್ತರಂಜನಂ ಸದೈವ ನಂದನಂದನಮ್ ।**

**ಸುಪಿಚ್ಛಗುಚ್ಛಮಸ್ತಕಂ ಸುನಾದವೇಣುಹಸ್ತಕಂ ಅನಂಗರಂಗಸಾಗರಂ ನಮಾಮಿ ಕೃಷ್ಣನಾಗರಮ್ ॥**

ಮನೋಜಗರ್ವಮೋಚನಂ ವಿಶಾಲಲೋಲಲೋಚನಂ
ವಿಧೂತಗೋಪಶೋಚನಂ ನಮಾಮಿ ಪದ್ಮಲೋಚನಮ್ ।
ಕರಾರವಿಂದಭೂಧರಂ ಸ್ಮಿತಾವಲೋಕಸುಂದರಂ
ಮಹೇಂದ್ರಮಾನದಾರಣಂ ನಮಾಮಿ ಕೃಷ್ಣವಾರಣಮ್ ॥
ಕದಂಬಸೂನಕುಂಡಲಂ ಸುಚಾರುಗಂಡಮಂಡಲಂ
ವ್ರಜಾಂಗನೈಕವಲ್ಲಭಂ ನಮಾಮಿ ಕೃಷ್ಣದುರ್ಲಭಮ್ ।
ಯಶೋದಯಾ ಸಮೋದಯಾ ಸಗೋಪಯಾ ಸನಂದಯಾ
ಯುತಂ ಸುಖೈಕದಾಯಕಂ ನಮಾಮಿ ಗೋಪನಾಯಕಮ್ ॥
ಸದೈವ ಪಾದಪಂಕಜಂ ಮದೀಯ ಮಾನಸೇ ನಿಜಂ
ದಧಾನಮುಕ್ತಮಾಲಕಂ ನಮಾಮಿ ನಂದಬಾಲಕಮ್ ।
ಸಮಸ್ತದೋಷಶೋಷಣಂ ಸಮಸ್ತಲೋಕಪೋಷಣಂ
ಸಮಸ್ತಗೋಪಮಾನಸಂ ನಮಾಮಿ ನಂದಲಾಲಸಮ್ ॥
ಭುವೋ ಭರಾವತಾರಕಂ ಭವಾಬ್ಧಿಕರ್ಣಧಾರಕಂ
ಯಶೋಮತೀಕಿಶೋರಕಂ ನಮಾಮಿ ಚಿತ್ತಚೋರಕಮ್ ।
ದೃಗಂತಕಾಂತಭಂಗಿನಂ ಸದಾ ಸದಾಲಸಂಗಿನಂ
ದಿನೇ ದಿನೇ ನವಂ ನವಂ ನಮಾಮಿ ನಂದಸಂಭವಮ್ ॥
ಗುಣಾಕರಂ ಸುಖಾಕರಂ ಕೃಪಾಕರಂ ಕೃಪಾಪರಂ
ಸುರದ್ವಿಷನ್ನಿಕಂದನಂ ನಮಾಮಿ ಗೋಪನಂದನಮ್ ।
ನವೀನಗೋಪನಾಗರಂ ನವೀನಕೇಲಿಲಂಪಟಂ
ನಮಾಮಿ ಮೇಘಸುಂದರಂ ತಡಿತ್ಪ್ರಭಾಲಸತ್ಪಟಮ್ ॥
ಸಮಸ್ತಗೋಪನಂದನಂ ಹೃದಂಬುಜೈಕಮೋದನಂ
ನಮಾಮಿ ಕುಂಜಮಧ್ಯಗಂ ಪ್ರಸನ್ನಭಾನುಶೋಭನಮ್ ।
ನಿಕಾಮಕಾಮದಾಯಕಂ ದೃಗಂತಚಾರುಸಾಯಕಂ
ರಸಾಲವೇಣುಗಾಯಕಂ ನಮಾಮಿ ಕುಂಜನಾಯಕಮ್ ॥
ವಿದಗ್ಧಗೋಪಿಕಾಮನೋ ಮನೋಜ್ಞತಲ್ಪಶಾಯಿನಂ

**ನಮಾಮಿ ಕುಂಜಕಾನನೇ ಪ್ರವೃದ್ಧವಹ್ನಿಪಾಯಿನಮ್ ।**

**ಕಿಶೋರಕಾಂತಿರಂಜಿತಂ ದೃಗಂಜನಂ ಸುಶೋಭಿತಂ**

**ಗಜೇಂದ್ರಮೋಕ್ಷಕಾರಿಣಂ ನಮಾಮಿ ಶ್ರೀವಿಹಾರಿಣಮ್ ॥**

**ಯದಾ ತದಾ ಯಥಾ ತಥಾ ತಥೈವ ಕೃಷ್ಣಸತ್ಕಥಾ**

**ಮಯಾ ಸದೈವ ಗೀಯತಾಂ ತಥಾ ಕೃಪಾ ವಿಧೀಯತಾಮ್ ।**

**ಪ್ರಮಾಣಿಕಾಷ್ಟಕದ್ವಯಂ ಜಪತ್ಯಧೀತ್ಯ ಯಃ ಪುಮಾನ್**

**ಭವೇತ್ ಸ ನಂದನಂದನೇ ಭವೇ ಭವೇ ಸುಭಕ್ತಿಮಾನ್ ॥**

ಮಹಾದ್ವಾರವನ್ನು ದಾಟಿ ಬಂದಂತೇ ಎದುರಿಗೆ ಶಾರದಾಂಬೆಯ ಮತ್ತು ಶಂಕರ ಭಗವತ್ಪಾದರ ದೇವಾಲಯದ ಸಂಕೀರ್ಣದ ಮುಖ್ಯ ದ್ವಾರ. ಗೋಪುರದ ಮೇಲೆ ಶಾರದಾಂಬೆಯ ಮತ್ತು ಶಂಕರರ ವರ್ಣರಂಜಿತ ಸುಂದರ ವಿಗ್ರಹಗಳು.



ಬಲಗಡೆ ಸುಂದರ ಹೂದೋಟ. ಶಂಕರ ಭಗವತ್ಪಾದರ ಭವ್ಯ ವಿಗ್ರಹ.



ಕೈಲಾಸದಿಂದ ಚಂದ್ರಮೌಳೀಶ್ವರನನ್ನು ಧರೆಗೆ ತಂದು, ಸೌಂದರ್ಯಲಹರಿಯನ್ನು ಉಪದೇಶಿಸುತ್ತಿರುವಂತಹ ಅದ್ಭುತ ಧ್ವನಿ ತರಂಗಗಳ ನಾದದ ಅನುಭೂತಿ.

**ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ**
**ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ ।**
**ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚಾದಿಭಿರಪಿ**
**ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ॥**
**ಅವಿದ್ಯಾನಾಮಂತ-ಸ್ತಿಮಿರ-ಮಿಹಿರದ್ವೀಪನಗರೀ**
**ಜಡಾನಾಂ ಚೈತನ್ಯ-ಸ್ತಬಕ-ಮಕರಂದ-ಸ್ರುತಿಝರೀ ।**
**ದರಿದ್ರಾಣಾಂ ಚಿಂತಾಮಣಿಗುಣನಿಕಾ ಜನ್ಮಜಲಧೌ**
**ನಿಮಗ್ನಾನಾಂ ದಂಷ್ಟ್ರಾ ಮುರರಿಪು-ವರಾಹಸ್ಯ ಭವತಿ ॥**
**ಶರಜ್ಜ್ಯೋತ್ಸ್ನಾಶುದ್ಧಾಂ ಶಶಿಯುತಜಟಾಜೂಟಮಕುಟಾಂ**
**ವರತ್ರಾಸತ್ರಾಣಸ್ಫಟಿಕಘಟಿಕಾಪುಸ್ತಕಕರಾಮ್ ।**
**ಸಕೃನ್ನ ತ್ವಾ ನತ್ವಾ ಕಥಮಿವ ಸತಾಂ ಸಂನ್ನಿದಧತೇ**
**ಮಧುಕ್ಷೀರದ್ರಾಕ್ಷಾಮಧುರಿಮಧುರೀಣಾಃ ಭಣಿತಯಃ ॥**
**ಶಿವಃ ಶಕ್ತಿಃ ಕಾಮಃ ಕ್ಷಿತಿರಥ ರವಿಃ ಶೀತಕಿರಣಃ**
**ಸ್ಮರೋ ಹಂಸಃ ಶಕ್ರಸ್ತದನು ಚ ಪರಾಮಾರಹರಯಃ ।**
**ಅಮೀ ಹೃಲ್ಲೇಖಾಭಿಸ್ತಿಸೃಭಿರವಸಾನೇಷು ಘಟಿತಾ**
**ಭಜಂತೇ ವರ್ಣಾಸ್ತೇ ತವ ಜನನಿ ನಾಮಾವಯವತಾಮ್ ॥**
**ಪ್ರದೀಪಜ್ವಾಲಾಭಿರ್ದಿವಸಕರನೀರಾಜನವಿಧಿಃ**
**ಸುಧಾಸೂತೇಶ್ಚಂದ್ರೋಪಲಜಲಲವೈರರ್ಘ್ಯರಚನಾ ।**
**ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ**
**ತ್ವದೀಯಾಭಿರ್ವಾಗ್ಭಿಸ್ತವ ಜನನಿ ವಾಚಾಂ ಸ್ತುತಿರಿಯಮ್ ॥**

ಕಾಲಟೀ ಕ್ಷೇತ್ರವನ್ನು ಉದ್ಧರಿಸುವ ಮಹಾಸಂಕಲ್ಪದ ಮಹಾಗುರು ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಮಹಾಭಾರತೀ ಸ್ವಾಮಿಗಳನ್ನು ನೆನೆಯುತ್ತಾ ದೇವಾಲಯದ ಸಂಕೀರ್ಣದ ಒಳಗೆ ಪ್ರವೇಶ ಮಾಡುತ್ತಿದಂತೆಯೇ ಸಾಕ್ಷಾತ್ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಮಹಾಭಾರತೀ

ಸ್ವಾಮಿಗಳ ದರ್ಶನ. ಗುರುಗಳನ್ನು ಜೀವಂತವಾಗಿಯೇ ನೋಡುತ್ತಿರುವಂತಹ ಮೈ ನವಿರೇಳುವ ಅನುಭವ. ಶತಮಾನದ ಹಿಂದಿನವರಿಗೆ ಮಾತ್ರ ಲಭ್ಯವಿದ್ದ ಗುರುಸನ್ನಿಧಿ ನಮಗೂ ಲಭ್ಯ. ಸಮಸ್ತ ವಿದ್ಯೆಗಳನ್ನೂ, ಮಂತ್ರಗಳನ್ನೂ ಬಲ್ಲವರೂ, ಆತ್ಮಧ್ಯಾನದಲ್ಲೇ ನಿರತರಾದವರೂ, ಈಶ್ವರ ಸ್ವರೂಪಿಗಳೂ ಆದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಮಹಾಭಾರತೀ ಸ್ವಾಮಿಗಳು.



**ಶ್ರೀ ಸಚ್ಚಿದಾನಂದ ಶಿವಾಭಿನವ್ಯ ನೃಸಿಂಹ ಭಾರತ್ಯಭಿಧಾನ್ ಯತೀಂದ್ರಾನ್ ।**

**ವಿದ್ಯಾನಿಧಿನ್ ಮಂತ್ರನಿಧಿನ್ ಸದಾತ್ಮನಿಷ್ಠಾನ್**

**ಭಜೇ ಮಾನವ ಶಂಭು ರೂಪಾನ್ ॥**

ಶಂಕರ ಭಗವತ್ಪಾದರ ತತ್ತ್ವ ಪ್ರಸಾರದಿಂದ ಜನರಲ್ಲಿ ಹೊಸ ಚೇತನ ಮೂಡಿಸಿದ ದಿವ್ಯ ಚೇತನದ ಸ್ತುತಿ.

ಯಚ್ಛಿಷ್ಯ ಹೃತ್ತಾಪ ದವಾಗ್ನಿಭಯನಿವಾರಿಣೇ ಮಹಾಮೇಘಃ
ಯಚ್ಛಿಷ್ಯ ರೋಗಾರ್ತಿ ಮಹಾಹಿವಿಷವಿನಾಶನೇ ಸುಪರ್ಣಾತ್ಮಾ ।
ಯಚ್ಛಿಷ್ಯ ಸಂದೋಹ ವಿಪಕ್ಷಗಿರಿ ವಿಭೇದನೇ ಪವಿಸ್ಸೋಽರ್ಚ್ಯಃ
ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮೀ ॥ ೧ ॥
ಯಂ ಶಂಕರಾರ್ಯಾಪರರೂಪ ಇತಿ ತಪೋನಿಧಿಂ ಭಜಂತ್ಯಾರ್ಯಾಃ
ಯಂ ಭಾರತೀಪುಂತನುರೂಪ ಇತಿ ಕಳಾನಿಧಿಂ ಸ್ತುವಂತ್ಯನ್ಯೇ ।
ಯಂ ಸದ್ಗುಣಾಢ್ಯಂ ನಿಜದೈವಮಿತಿ ನಮಂತಿ ಸಂಶ್ರಿತಾಸ್ಸೋಽರ್ಚ್ಯಃ
ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮೀ ॥ ೨ ॥
ಯೇನಾಶ್ರಿತಂ ಸಜ್ಜನತುಷ್ಟಿಕರಮಭೀಪ್ಸಿತಂ ಚತುರ್ಭದ್ರಂ
ಯೇನಾದೃತಂ ಶಿಷ್ಯಸುಧೀಸುಜನ ಶಿವಂಕರಂ ಕಿರೀಟಾದ್ಯಮ್ ।
ಯೇನೋದ್ಧೃತಾ ಸಂಯಮಿಲೋಕನುತ ಮಹಾನುಭಾವ ತಾ ಸೋಽರ್ಚ್ಯಃ
ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮೀ ॥ ೩ ॥
ಯಸ್ಮೈ ನೃಪಾದ್ಯಾಬಿರುದಂ ದದತಿ ವಿಭೂಷಣಾದಿಕಂ ಭಕ್ತ್ಯಾ
ಯಸ್ಮೈ ಪ್ರಯಚ್ಛಂತಿ ಮುದಾಭಜಕ ಜನಾನ್ನೃಪೋಪಚಾರಾದೀನ್ ।
ಯಸ್ಮೈ ಪ್ರದತ್ತಾ ಗುರುಣಾ ಸ್ವಕೃತ ತಪೋವಿಭೂತಯಸ್ಸೋಽರ್ಚ್ಯಃ
ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮೀ ॥ ೪ ॥
ಯಸ್ಮಾದಭೀಷ್ಟಾರ್ಥಚಯಾಪ್ತಿರಿಹ ಭವತ್ಯಮೋಘಮಾರ್ತಾನಾಂ
ಯಸ್ಮಾತ್ಕಟಾಕ್ಷಾಸ್ಸದಯಾಃ ಕುಶಲಕರಾಸ್ಸರಂತಿ ಭಕ್ತೇಷು ।
ಯಸ್ಮಾತ್ಸದಾನಂದದ ಸೂಕ್ತ್ಯಮೃತ ಧುನೀ ಪ್ರಜಾಯತೇ ಸೋಽರ್ಚ್ಯಃ
ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮೀ ॥ ೫ ॥
ಯಸ್ಯಾಂಗಕೇ ಭಾತಿ ಮಹತ್ತ್ವಗುಣವಿಬೋಧಕಂ ಮಹಾತೇಜಃ
ಯಸ್ಯೋಕ್ತಿಪೂರೇ ಋತಪೂತಹಿತ ಸದಂಬುಭಕ್ತಪಾನೀಯಮ್ ।
ಯಸ್ಯಾಂತರಂಗೇಹಿ ಶಿವೋಹಮಿತಿ ವಿಭಾವನೈಕತಾ ಸೋಽರ್ಚ್ಯಃ
ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮೀ ॥ ೬ ॥

**ಯಸ್ಮಿನ್ ಸ್ಥಿತಾ ಶೃಂಗಗಿರೀಡ್ಯಯತಿ ಪರಂಪರಾತ್ತದಿವ್ಯಶ್ರೀಃ**

**ಯಸ್ಮಿನ್ ಚಕಾಸ್ತ್ಯುದ್ಧೃತವಾದಿ ಜಯಕರೀ ಯಶಃಕರೀ ವಿದ್ಯಾ ।**

**ಯಸ್ಮಿನ್ ಸುವಿಜ್ಞಾನವಿರಕ್ತಿ ಶಮದಮಾದಿಸಂಪದಸ್ಸೋಽರ್ಚ್ಯಃ**

**ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮೀ ॥ ೭ ॥**

**ಯೋಽರ್ಚ್ಯೋಽರ್ಭಜೇಯಂ ಶರಣಂ ಭವುಕಯುತೋಽಸ್ಮಿ ಯೇನ ಯಸ್ಮೈಗೀಃ**

**ದತ್ತಾ ಚ ಯಸ್ಮಾತ್ಸುಖಮೀಪ್ಸಿತಮುಚಿತಂ ಹಿ ಯಸ್ಯ ದಾಸೋಽಹಮ್ ।**

**ಯಸ್ಮಿನ್ ಮನಸ್ಸಂತತಭಕ್ತಿಯುತಮಭೂತ್ಸ ಏವ ಪಾಹಿ ತ್ವಂ**

**ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮೀ ॥ ೮ ॥**

ಗುರುಗಳ ಸಂಕಲ್ಪದಿಂದ ನಿರ್ಮಿತವಾದ ಚೊಕ್ಕವಾದ ಸುಂದರವಾದ ಶಿಲ್ಪಶಾಸ್ತ್ರಕ್ಕೆ ಅನುಗುಣವಾದ ಎರಡು ಪ್ರತ್ಯೇಕ ಪ್ರತ್ಯೇಕವಾದ ಶ್ರೀ ಶಾರದಾ ದೇವಿಗಾಗಿಯೂ, ಶ್ರೀ ಶಂಕರ ಭಗವತ್ಪಾದರಿಗಾಗಿಯೂ ಇರುವ ಎರಡು ಶಿಲಾ ದೇವಾಲಯಗಳು.

ಆಜ್ಞಾ, ವಿಶುದ್ಧ, ಅನಾಹತ, ಸ್ವಾಧಿಷ್ಠಾನ್, ಮಣಿಪೂರ, ಮೂಲಾಧಾರಗಳೆಂಬ ಷಟ್ಚಕ್ರ ಕಮಲಗಳ ಮೇಲೆ ವಿರಾಜಿಸುತ್ತಿರುವ ಮನಸ್ ತತ್ತ್ವವೂ, ಆಕಾಶ ತತ್ತ್ವವೂ, ವಾಯು ತತ್ತ್ವವೂ, ಅಗ್ನಿ ತತ್ತ್ವವೂ, ಜಲ ತತ್ತ್ವವೂ, ಪೃಥ್ವೀ ತತ್ತ್ವವೂ ಆಗಿರುವ ಭಗವತಿ, ಪರಬ್ರಹ್ಮ ಸ್ವರೂಪಿಣಿ ಬ್ರಾಹ್ಮಿ ಶ್ರೀಶಾರದಾಂಬೆ. ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ, ಚಾಮುಂಡಾ ಮಾತೃಕೆಯರಿಂದ ಆವೃತವಾಗಿರುವ ಸಪ್ತಮಾತೃಕಾ ಶಕ್ತಿ ಬ್ರಾಹ್ಮಿ ಶಾರದಾಂಬೆ. ಸೃಷ್ಟಿ, ಸ್ಥಿತಿ ಮತ್ತು ಲಯದ ಅಧಿದೇವತೆ, ವಿದ್ಯಾ ಮತ್ತು ನಾದದ ಅಭಿಮಾನಿ ದೇವತೆ, ಓಂಕಾರ ಸ್ವರೂಪ ಪರಬ್ರಹ್ಮ ಸ್ವರೂಪಿಣಿಯೂ ಆದ ಶ್ರೀಶಾರದಾಂಬೆ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಮಹಾಭಾರತೀ ಸ್ವಾಮಿಗಳನ್ನು ಪ್ರೇರೇಪಿಸಿ ಮಾರ್ಗದರ್ಶನ ನೀಡಿದ ಶ್ರೀ ಶಾರದಾಂಬೆಯ ಹಸ್ತಗಳಲ್ಲಿ ಅಮೃತತತ್ತ್ವದ ಸಂಕೇತವಾದ ಅಮೃತ ಕಲಶ, ಪರಾವಿದ್ಯೆಯ ಪ್ರತೀಕವಾದ ಪುಸ್ತಕ, ವಿಶ್ವದ ಸ್ಥೂಲರೂಪವಾದ ಅಕ್ಷರ ಶಕ್ತಿಗಳನ್ನು ಪ್ರತಿಬಿಂಬಿಸುವ ಜಪಮಾಲೆ ಮತ್ತು ಜೀವಬ್ರಹ್ಮೈಕ ತತ್ತ್ವ ಜ್ಞಾನದ ಪ್ರತೀಕವಾಗಿರುವ ಚಿನ್ಮುದ್ರೆ.

ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ ಸ್ವರೂಪಳಾಗಿರುವ ಶ್ರೀಶಾರದಾಂಬೆಯ ಭುಜಂಗ ಸ್ತೋತ್ರ.



**ಸುವಕ್ಷೋಜಕುಂಭಾಂ ಸುಧಾಪೂರ್ಣಕುಂಭಾಂ**

**ಪ್ರಸಾದಾವಲಂಬಾಂ ಪ್ರಪುಣ್ಯಾವಲಂಬಾಮ್ ।**

ಸದಾಸ್ಯೇಂದುಬಿಂಬಾಂ ಸದಾನೋಷ್ಠಬಿಂಬಾಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 1 ॥

ಕಟಾಕ್ಷೇ ದಯಾರ್ದ್ರಾಂ ಕರೇ ಜ್ಞಾನಮುದ್ರಾಂ

ಕಲಾಭಿರ್ವಿನಿದ್ರಾಂ ಕಲಾಪೈಃ ಸುಭದ್ರಾಮ್ ।

ಪುರಸ್ತ್ರೀಂ ವಿನಿದ್ರಾಂ ಪುರಸ್ತುಂಗಭದ್ರಾಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 2 ॥

ಲಲಾಮಾಂಕಫಾಲಾಂ ಲಸದ್ಗಾನಲೋಲಾಂ

ಸ್ವಭಕ್ತೈಕಪಾಲಾಂ ಯಶಃಶ್ರೀಕಪೋಲಾಮ್ ।

ಕರೇ ತ್ವಕ್ಷಮಾಲಾಂ ಕನತ್ಪತ್ರಲೋಲಾಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 3 ॥

ಸುಸೀಮಂತವೇಣೀಂ ದೃಶಾ ನಿರ್ಜಿತೈಣೀಂ

ರಮತ್ಕೀರವಾಣೀಂ ನಮದ್ವಜ್ರಪಾಣೀಮ್ ।

ಸುಧಾಮಂಥರಾಸ್ಯಾಂ ಮುದಾ ಚಿಂತ್ಯವೇಣೀಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 4 ॥

ಸುಶಾಂತಾಂ ಸುದೇಹಾಂ ದೃಗಂತೇ ಕಚಾಂತಾಂ

ಲಸತ್ಸಲ್ಲತಾಂಗೀಮನಂತಾಮಚಿಂತ್ಯಾಮ್ ।

ಸ್ಮರೇತ್ತಾಪಸೈಃ ಸರ್ಗಪೂರ್ವಸ್ಥಿತಾಂ ತಾಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 5 ॥

ಕುರಂಗೇ ತುರಂಗೇ ಮೃಗೇಂದ್ರೇ ಖಗೇಂದ್ರೇ

ಮರಾಲೇ ಮದೇಭೇ ಮಹೋಕ್ಷೇಽಧಿರೂಢಾಮ್ ।

ಮಹತ್ಯಾಂ ನವಮ್ಯಾಂ ಸದಾ ಸಾಮರೂಪಾಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 6 ॥

ಜ್ವಲತ್ಕಾಂತಿವಹ್ನಿಂ ಜಗನ್ಮೋಹನಾಂಗೀಂ

ಭಜೇ ಮಾನಸಾಂಭೋಜ ಸುಭ್ರಾಂತಭೃಂಗೀಮ್ ।

**ನಿಜಸ್ತೋತ್ರಸಂಗೀತನೃತ್ಯಪ್ರಭಾಂಗೀಂ**

**ಭಜೇ ಶಾರದಾಂಬಾಮಜಸ್ರಂ ಮದಂಬಾಮ್** ॥ 7 ॥

**ಭವಾಂಭೋಜನೇತ್ರಾಜಸಂಪೂಜ್ಯಮಾನಾಂ**

**ಲಸನ್ಮಂದಹಾಸಪ್ರಭಾವಕ್ತ್ರಚಿಹ್ನಾಮ್** ।

**ಚಲಚ್ಚಂಚಲಾಚಾರುತಾಟಂಕಕರ್ಣಾಂ**

**ಭಜೇ ಶಾರದಾಂಬಾಮಜಸ್ರಂ ಮದಂಬಾಮ್** ॥ 8 ॥

ಶ್ರೀಶಾರದಾಂಬೆಯ ಸನ್ನಿಧಿಗೆ ಅತಿ ಸಮೀಪದಲ್ಲಿಯೇ ಶ್ರೀ ಶಂಕರ ಭಗವತ್ಪಾದರು ತಮ್ಮ ಪೂಜ್ಯ ಜನನಿಯವರ ಸಂಸ್ಕಾರ ಮಾಡಿದ ಪವಿತ್ರ ಸ್ಥಳ.

ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ।

ಮಲಬಾರಿನ ತಿಳಿದ ಜನಗಳಿಂದ ಪವಿತ್ರ ಭೂಮಿಯೆಂದು ಭಾವಿಸಲ್ಪಟ್ಟ ದಿವ್ಯ ಸಮಾಧಿಯ ಸ್ಥಳ. ಈ ಸ್ಥಳದ ಮೃತ್ತಿಕೆ ಸರ್ವರಿಗೂ ರಕ್ಷೆ. ಸನ್ಯಾಸ ಸ್ವೀಕರಿಸಿ ತಾಯಿಯನ್ನಗಲಿ ಹೊರಟಾಗ ತಾಯಿಗೆ ನೀಡಿದ ವಾಗ್ದಾನ; ಅವಸಾನ ಕಾಲದಲ್ಲಿ ಭಗವಂತನ ದರ್ಶನ ಭಾಗ್ಯ. ಅದರಂತೆಯೇ ನಡೆದ ಶಂಕರ ಭಗವತ್ಪಾದರು ಮಾತೆಯ ಅಂತ್ಯಕಾಲದಲ್ಲಿ ಶ್ರೀಮಹಾವಿಷ್ಣುವನ್ನು ಸ್ತುತಿಸಿ, ಮಾತೆಗೆ ಶ್ರೀವಿಷ್ಣುವಿನ ರೂಪವನ್ನು ಧ್ಯಾನಿಸುತ್ತಾ ಶರೀರವನ್ನು ತ್ಯಜಿಸಿ ಪರಂಧಾಮನಲ್ಲಿ ಐಕ್ಯವಾಗಿ ವಿಷ್ಣು ಸಾಯುಜ್ಯವನ್ನು ಪಡೆಯುವಂತೆ ಮಾಡಿದ ಶಂಕರ ಭಗವತ್ಪಾದರ ವಿಷ್ಣು ಷಟ್ಪದೀ ಸ್ತೋತ್ರಮ್.

**ಅವಿನಯಮಪನಯ ವಿಷ್ಣೋ ದಮಯ ಮನಃ ಶಮಯ ವಿಷಯಮೃಗತೃಷ್ಣಾಮ್** ।

**ಭೂತದಯಾಂ ವಿಸ್ತಾರಯ ತಾರಯ ಸಂಸಾರಸಾಗರತಃ** ॥ 1 ॥

**ದಿವ್ಯಧುನೀಮಕರಂದೇ ಪರಿಮಳಪರಿಭೋಗಸಚ್ಚಿದಾನಂದೇ** ।

**ಶ್ರೀಪತಿಪದಾರವಿಂದೇ ಭವಭಯಖೇದಚ್ಛಿದೇ ವಂದೇ** ॥ 2 ॥

**ಸತ್ಯಪಿ ಭೇದಾಪಗಮೇ ನಾಥ ತವಾಽಹಂ ನ ಮಾಮಕೀನಸ್ತ್ವಮ್** ।

**ಸಾಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತಾರಂಗಃ** ॥ 3 ॥

**ಉದ್ಧೃತನಗ ನಗಭಿದನುಜ ದನುಜಕುಲಾಮಿತ್ರ ಮಿತ್ರಶಶಿದೃಷ್ಟೇ** ।

**ದೃಷ್ಟೇ ಭವತಿ ಪ್ರಭವತಿ ನ ಭವತಿ ಕಿಂ ಭವತಿರಸ್ಕಾರಃ** ॥ 4 ॥

**ಮತ್ಸ್ಯಾದಿಭಿರವತಾರೈರವತಾರವತಾಽವತಾ ಸದಾ ವಸುಧಾಮ್** ।

**ಪರಮೇಶ್ವರ ಪರಿಪಾಲ್ಯೋ ಭವತಾ ಭವತಾಪಭೀತೋಽಹಮ್** ॥ 5 ॥

**ದಾಮೋದರ ಗುಣಮಂದಿರ ಸುಂದರವದನಾರವಿಂದ ಗೋವಿಂದ ।**

**ಭವಜಲಧಿಮಥನಮಂದರ ಪರಮಂ ದರಮಪನಯ ತ್ವಂ ಮೇ** ॥ 6 ॥

**ನಾರಾಯಣ ಕರುಣಾಮಯ ಶರಣಂ ಕರವಾಣಿ ತಾವಕೌ ಚರಣೌ ।**

**ಇತಿ ಷಟ್ಪದೀ ಮದೀಯೇ ವದನಸರೋಜೇ ಸದಾ ವಸತು** ॥

ಶ್ರೀ ಶಂಕರ ಭಗವತ್ಪಾದರ ಮಾತೃಶ್ರೀಯವರ ಸಂಸ್ಕಾರ ನಡೆದಂತಹ ಪ್ರದೇಶದಲ್ಲಿ ಶ್ರೀಶಾರದಾ ದೇವಾಲಯ ಮತ್ತು ಶ್ರೀ ಶಂಕರ ಭಗವತ್ಪಾದರಿಗೆ ದಿವ್ಯ ಸ್ಮಾರಕವನ್ನು ನಿರ್ಮಿಸಬೇಕೆಂಬ ಬೃಹತ್ ಸಂಕಲ್ಪವುಳ್ಳ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಮಹಾ ಭಾರತೀ ಸ್ವಾಮಿಗಳಿಗೆ ದೇಗುಲ ಸಂಕೀರ್ಣದ ಉದ್ಘಾಟನೆಯ ಸಮಾರಂಭ ಸಮಯದಲ್ಲಿ ದರ್ಶನವಿತ್ತು, ಆಮೋದವನ್ನಿತ್ತ ಮಹಾಮಾತೆ. ಮಹಾಮಾತೆಯ ಸಮಾಧಿಗೆ ವಂದಿಸಿ ಶ್ರೀ ಶಂಕರ ಭಗವತ್ಪಾದರ ದೇಗುಲಕ್ಕೆ ಹೋಗುವ ಮುನ್ನ ಜಗದ್ಗುರುಗಳ ಈ ಮಹಾಸಂಕಲ್ಪವನ್ನು ನಿರ್ವಿಘ್ನವಾಗಿ ನೆರವೇರಿಸಿದ ಶಕ್ತಿ ಗಣಪತಿಯ ಸನ್ನಿಧಾನ.

ಏಕದಂತಾಯ ವಿದ್ಮಹೇ ವಕ್ರತುಂಡಾಯ ಧೀಮಹಿ ।

ತನ್ನೋ ದಂತಿಃ ಪ್ರಚೋದಯಾತ್ ।

ಓಂಕಾರದ ಸಂಕೇತವಾಗಿರುವ ಬಾಗಿದ ಸೊಂಡಿಲು; ಕರ್ಮ-ಕಾಂಡಗಳ ಪ್ರತೀಕಗಳಾಗಿರುವ ಭಗ್ನ ದಂತಗಳು; ಎಲ್ಲರ ಪ್ರಾರ್ಥನೆಗಳನ್ನು ಆಲಿಸಿ, ನೆರವೇರಿಸಲು ದೊಡ್ಡದಾಗಿರುವ ಕರ್ಣದ್ವಯ; ಇಂದ್ರಿಯಗಳನ್ನು ಅಂತರ್ಮುಖವಾಗಿಸಿಕೊಳ್ಳಬೇಕೆಂದು ಸೂಚಿಸುತ್ತಿರುವ ನೇತ್ರಗಳು; ಚತುರ್ವಿಧ ಪುರುಷಾರ್ಥಗಳನ್ನು ಪಡೆಯಲು ತಡೆಯುತ್ತಿರುವ ಸಮಸ್ತ ವಿಘ್ನ ಪರಿಹಾರವಾಗಿರುವ ಪಾಶ-ಅಂಕುಶ; ದಂತ ಮೋದಕಗಳಿರುವ ಚತುರ್ಬಾಹುಗಳು; ಬೆಟ್ಟದಂತಹ ವಿಘ್ನಗಳನ್ನೆಲ್ಲಾ ಭೇಧಿಸುವ ವಜ್ರಾಯುಧದಂತಿರುವ ಪಾದಕಮಲಗಳಿರುವ ಗಣೇಶನ ಶಂಕರ ಭಗವತ್ಪಾದ ವಿರಚಿತ ಸ್ತುತಿ.

**ಮುದಾಕರಾತ್ತ ಮೋದಕಂ ಸದಾ ವಿಮುಕ್ತಿ ಸಾಧಕಮ್ । ಕಳಾಧರಾವತಂಸಕಂ**

**ವಿಲಾಸಿಲೋಕ ರಕ್ಷಕಮ್ । ಅನಾಯಕೈಕ ನಾಯಕಂ ವಿನಾಶಿತೇಭ ದೈತ್ಯಕಮ್ ।**

**ನತಾಶುಭಾಶು ನಾಶಕಂ ನಮಾಮಿ ತಂ ವಿನಾಯಕಮ್** ॥ 1 ॥

**ನತೇತರಾತಿ ಭೀಕರಂ ನವೋದಿತಾರ್ಕ ಭಾಸ್ವರಮ್ ।**


**ನಮತ್ಸುರಾರಿ ನಿರ್ಜರಂ ನತಾಧಿಕಾಪದುದ್ಧರಮ್ ।**

**ಸುರೇಶ್ವರಂ ನಿಧೀಶ್ವರಂ ಗಜೇಶ್ವರಂ ಗಣೇಶ್ವರಮ್ ।**

**ಮಹೇಶ್ವರಂ ತಮಾಶ್ರಯೇ ಪರಾತ್ಪರಂ ನಿರಂತರಮ್** ॥ 2 ॥

ಸಮಸ್ತ ಲೋಕ ಶಂಕರಂ ನಿರಸ್ತ ದೈತ್ಯ ಕುಂಜರಮ್ ।
ದರೇತರೋದರಂ ವರಂ ವರೇಭ ವಕ್ತ್ರಮಕ್ಷರಮ್ ।
ಕೃಪಾಕರಂ ಕ್ಷಮಾಕರಂ ಮುದಾಕರಂ ಯಶಸ್ಕರಮ್ ।
ಮನಸ್ಕರಂ ನಮಸ್ಕೃತಾಂ ನಮಸ್ಕರೋಮಿ ಭಾಸ್ವರಮ್ ॥ 3 ॥
ಅಕಿಂಚನಾರ್ತಿ ಮಾರ್ಜನಂ ಚಿರಂತನೋಕ್ತಿ ಭಾಜನಮ್ ।
ಪುರಾರಿ ಪೂರ್ವ ನಂದನಂ ಸುರಾರಿ ಗರ್ವ ಚರ್ವಣಮ್ ।
ಪ್ರಪಂಚ ನಾಶ ಭೀಷಣಂ ಧನಂಜಯಾದಿ ಭೂಷಣಮ್ ।
ಕಪೋಲ ದಾನವಾರಣಂ ಭಜೇ ಪುರಾಣ ವಾರಣಮ್ ॥ 4 ॥
ನಿತಾಂತ ಕಾಂತಿ ದಂತ ಕಾಂತಿ ಮಂತ ಕಾಂತಿ ಕಾತ್ಮಜಮ್ ।
ಅಚಿಂತ್ಯ ರೂಪಮಂತ ಹೀನ ಮಂತರಾಯ ಕೃಂತನಮ್ ।
ಹೃದಂತರೇ ನಿರಂತರಂ ವಸಂತಮೇವ ಯೋಗಿನಾಮ್ ।
ತಮೇಕದಂತಮೇವ ತಂ ವಿಚಿಂತಯಾಮಿ ಸಂತತಮ್ ॥ 5 ॥
ಮಹಾಗಣೇಶ ಪಂಚರತ್ನಮಾದರೇಣ ಯೋಽನ್ವಹಮ್ ।
ಪ್ರಜಲ್ಪತಿ ಪ್ರಭಾತಕೇ ಹೃದಿ ಸ್ಮರಣ್ ಗಣೇಶ್ವರಮ್ ।
ಅರೋಗತಾಮದೋಷತಾಂ ಸುಸಾಹಿತೀಂ ಸುಪುತ್ರತಾಮ್ ।
ಸಮಾಹಿತಾಯು ರಷ್ಟಭೂತಿ ಮಭ್ಯುಪೈತಿ ಸೋಽಚಿರಾತ್ ॥

ಸಾಕ್ಷಾತ್ ಪರಮೇಶ್ವರನ ಅವತಾರ ಶ್ರೀ ಶಂಕರ ಭಗವತ್ಪಾದರ ಸನ್ನಿಧಾನ. ಶ್ರೀ ಶಂಕರ ಭಗವತ್ಪಾದರ ಜೀವನದ ಸುಂದರ ಚಿತ್ರಗಳಿಂದ ಸಜ್ಜಿತವಾಗಿರುವ ದೇಗುಲ.




ಯಾರ ದಿವ್ಯ ಕೃಪಾಕಟಾಕ್ಷದಿಂದ ನಾವೆಲ್ಲರೂ ಭಾರತೀಯರಾಗಿಯೇ ಇಂದು ಉಳಿದು ಬಾಳಲು ಸಾಧ್ಯವಾಯಿತೋ ಆ ಮಹಾಮಹಿಮನ ಸನ್ನಿಧಾನ. ಈ ಮಹಾತ್ಮರ ನಿತ್ಯ ಸ್ಮರಣೆಯು ಎಲ್ಲರಿಗೂ ದೊರಕುವಂತೆ ಮಾಡಬೇಕೆಂಬ ಜಗದ್ಗುರುಗಳ ದೃಢನಿರ್ಧಾರ ಸಾಕಾರವಾದ ತೀರ್ಥಕ್ಷೇತ್ರ. ಶ್ರೀಶಂಕರ ಭಗವತ್ಪಾದರ ಜನ್ಮಭೂಮಿಯಲ್ಲಿಯೇ ಅವರಿಗೊಂದು ದಿವ್ಯ ಸ್ಮಾರಕ. ನರರೂಪಧರನಾದ ಸಾಕ್ಷಾತ್ ಪರಮೇಶ್ವರ. ಸ್ವಪ್ರಕಾಶ, ಸರ್ವಭಾವಗಳ ಸಾಗರ, ಯುಗಾವತಾರ.

ಭಾರತಾದ್ಯಂತ ಸಂಚರಿಸಿ, ತಮ್ಮ ಪ್ರವಚನಗಳಿಂದ ಚರ್ಚೆಗಳಿಂದ ಏಕೀಕೃತ ಆಧ್ಯಾತ್ಮಿಕ ಭಾವನೆಯನ್ನು ಪ್ರಚಾರ ಮಾಡಿ, ಪರಸ್ಪರ ವಿರೋಧವೆನಿಸಿದ ವಿಭಿನ್ನ ಮತಗಳ ಹೊಂದಾಣಿಕೆಯನ್ನು ತೋರಿಸಿ, ಮತದ ಹೆಸರಿನಲ್ಲಿ ನಡೆಯುತ್ತಿದ್ದ ಅನಪೇಕ್ಷಿತ ದುಷ್ಟಾಚಾರಗಳನ್ನು ನಿರ್ಮೂಲನೆ ಮಾಡಿ, ಅಂಧಾಚಾರಗಳನ್ನು ವಿರೋಧಿಸಿ ಆಧ್ಯಾತ್ಮಿಕ ಜ್ಞಾನೋದಯದ ಹಾದಿ ತೋರಿದ ಶ್ರೀ ಶಂಕರ ಭಗವತ್ಪಾದರ ತೋಟಕಾಷ್ಟಕ.

**ವಿದಿತಾಖಿಲಶಾಸ್ತ್ರಸುಧಾಜಲಧೇ ಮಹಿತೋಪನಿಷತ್ ಕಥಿತಾರ್ಥನಿಧೇ |**
**ಹೃದಯೇ ಕಲಯೇ ವಿಮಲಂ ಚರಣಂ ಭವ ಶಂಕರ ದೇಶಿಕ ಮೇ ಶರಣಮ್ ||**
**ಕರುಣಾವರುಣಾಲಯ ಪಾಲಯ ಮಾಂ ಭವಸಾಗರದುಃಖವಿದೂನಹೃದಮ್ |**
**ರಚಯಾಖಿಲದರ್ಶನತತ್ತ್ವವಿದಂ ಭವ ಶಂಕರ ದೇಶಿಕ ಮೇ ಶರಣಮ್ ||**
**ಭವತಾ ಜನತಾ ಸುಹಿತಾ ಭವಿತಾ ನಿಜಬೋಧವಿಚಾರಣ ಚಾರುಮತೇ |**
**ಕಲಯೇಶ್ವರಜೀವವಿವೇಕವಿದಂ ಭವ ಶಂಕರ ದೇಶಿಕ ಮೇ ಶರಣಮ್ ||**
**ಭವ ಏವ ಭವಾನಿತಿ ಮೇ ನಿತರಾಂ ಸಮಜಾಯತ ಚೇತಸಿ ಕೌತುಕಿತಾ |**
**ಮಮ ವಾರಯ ಮೋಹಮಹಾಜಲಧಿಂ ಭವ ಶಂಕರ ದೇಶಿಕ ಮೇ ಶರಣಂ ||**
**ಸುಕೃತೇಽಧಿಕೃತೇ ಬಹುಧಾ ಭವತೋ ಭವಿತಾ ಸಮದರ್ಶನಲಾಲಸತಾ |**
**ಅತಿದೀನಮಿಮಂ ಪರಿಪಾಲಯ ಮಾಂ ಭವ ಶಂಕರ ದೇಶಿಕ ಮೇ ಶರಣಮ್ ||**
**ಜಗತೀಮವಿತುಂ ಕಲಿತಾಕೃತಯೋ ವಿಚರಂತಿ ಮಹಾಮಹಸಶ್ಛಲತಃ |**
**ಅಹಿಮಾಂಶುರಿವಾತ್ರ ವಿಭಾಸಿ ಗುರೋ ಭವ ಶಂಕರ ದೇಶಿಕ ಮೇ ಶರಣಮ್ ||**
**ಗುರುಪುಂಗವ ಪುಂಗವಕೇತನ ತೇ ಸಮತಾಮಯತಾಂ ನಹಿ ಕೋಽಪಿ ಸುಧೀಃ |**
**ಶರಣಾಗತವತ್ಸಲ ತತ್ತ್ವನಿಧೇ ಭವ ಶಂಕರ ದೇಶಿಕ ಮೇ ಶರಣಮ್ ||**

**ವಿದಿತಾ ನ ಮಯಾ ವಿಶದೈಕಕಲಾ ನ ಚ ಕಿಂಚನ ಕಾಂಚನಮಸ್ತಿ ಗುರೋ।**

**ದ್ರುತಮೇವ ವಿಧೇಹಿ ಕೃಪಾಂ ಸಹಜಾಂ ಭವ ಶಂಕರ ದೇಶಿಕ ಮೇ ಶರಣಮ್॥**

**ವಾಣೀ ಗುಣಾನುಕಥನೇ ಶ್ರವಣೌ ಕಥಾಯಾಂ**

**ಹಸ್ತೌ ಚ ಕರ್ಮ ಸುಮನಸ್ತವ ಪಾದಯೋರ್ನಃ।**

**ಸ್ಮೃತ್ಯಾಂ ಶಿರಸ್ತವ ನಿವಾಸ ಜಗತ್ಪ್ರಣಾಮೇ**

**ದೃಷ್ಟಿಃ ನತಾಂ ದರ್ಶನೇಸ್ತು ಭವತ್ತನೂನಾಮ್॥**

ಸಂಸಾರವೆಂಬ ವ್ಯಾಧಿಯನ್ನು ಹೋಗಲಾಡಿಸುವ ಅದ್ವಿತೀಯ ಔಷಧರೂಪನೂ, ಶರಣಾಗತ ಭಕ್ತರಿಗೆ ಅಭಯ ಹಸ್ತದಿಂದ ವರಪ್ರದಾನ ಮಾಡುವವನೂ ಆದ ಪರಮೇಶ್ವರನ ಮೂಲ ತತ್ತ್ವಗಳು ಪಂಚ ಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು, ಮನಸ್ಸು, ಜೀವ. ಇವೆಲ್ಲರ ಚೈತನ್ಯರೂಪದ ದೃಶ್ಯ ಶಂಕರ ಭಗವತ್ಪಾದರ ದ್ವಾದಶ ಜ್ಯೋತಿರ್ಲಿಂಗ ದರ್ಶನ, ಶಿವರಾತ್ರಿಯ ಪರ್ವದಿನದಂದು, ಕ್ಷೇತ್ರರಾಜ ಕಾಲಟಿಯಲ್ಲಿ.

**ಸೌರಾಷ್ಟ್ರದೇಶೇ ವಿಶದೇಽತಿರಮ್ಯೇ ಜ್ಯೋತಿರ್ಮಯಂ ಚಂದ್ರಕಳಾವತಂಸಮ್।**

**ಭಕ್ತಪ್ರದಾನಾಯ ಕೃಪಾವತೀರ್ಣಂ ತಂ ಸೋಮನಾಥಂ ಶರಣಂ ಪ್ರಪದ್ಯೇ॥**

**ಶ್ರೀಶೈಲಶೃಂಗೇ ವಿವಿಧಪ್ರಸಂಗೇ ಶೇಷಾದ್ರಿಶೃಂಗೇಽಪಿ ಸದಾ ವಸಂತಮ್।**

**ತಮರ್ಜುನಂ ಮಲ್ಲಿಕಪೂರ್ವಮೇನಂ ನಮಾಮಿ ಸಂಸಾರಸಮುದ್ರಸೇತುಮ್॥**

**ಅವಂತಿಕಾಯಾಂ ವಿಹಿತಾವತಾರಂ ಮುಕ್ತಿಪ್ರದಾನಾಯ ಚ ಸಜ್ಜನಾನಾಮ್।**

**ಅಕಾಲಮೃತ್ಯೋಃ ಪರಿರಕ್ಷಣಾರ್ಥಂ ವಂದೇ ಮಹಾಕಾಲಮಹಾಸುರೇಶಮ್॥**

**ಕಾವೇರಿಕಾನರ್ಮದಯೋಃ ಪವಿತ್ರೇ ಸಮಾಗಮೇ ಸಜ್ಜನತಾರಣಾಯ।**

**ಸದೈವ ಮಾಂಧಾತೃಪುರೇ ವಸಂತಂ ಓಂಕಾರಮೀಶಂ ಶಿವಮೇಕಮೀಡೇ॥**

**ಪೂರ್ವೋತ್ತರೇ ಪ್ರಜ್ವಲಿಕಾನಿಧಾನೇ ಸದಾ ವಸಂ ತಂ ಗಿರಿಜಾಸಮೇತಮ್।**

**ಸುರಾಸುರಾರಾಧಿತಪಾದಪದ್ಮಂ ಶ್ರೀವೈದ್ಯನಾಥಂ ತಮಹಂ ನಮಾಮಿ॥**

**ಯಂ ಡಾಕಿನಿಶಾಕಿನಿಕಾಸಮಾಜೇ ನಿಷೇವ್ಯಮಾಣಂ ಪಿಶಿತಾಶನೈಶ್ಚ।**

**ಸದೈವ ಭೀಮಾದಿಪದಪ್ರಸಿದ್ಧಂ ತಂ ಶಂಕರಂ ಭಕ್ತಹಿತಂ ನಮಾಮಿ॥**

ಶ್ರೀತಾಮ್ರಪರ್ಣೀಜಲರಾಶಿಯೋಗೇ ನಿಬಧ್ಯ ಸೇತುಂ ವಿಶಿಖೈರಸಂಖ್ಯೈಃ ।
ಶ್ರೀರಾಮಚಂದ್ರೇಣ ಸಮರ್ಪಿತಂ ತಂ ರಾಮೇಶ್ವರಾಖ್ಯಂ ನಿಯತಂ ನಮಾಮಿ ॥
ಯಾಮ್ಯೇ ಸದಂಗೇ ನಗರೇಽತಿರಮ್ಯೇ ವಿಭೂಷಿತಾಂಗಂ ವಿವಿಧೈಶ್ಚ ಭೋಗೈಃ ।
ಸದ್ಭಕ್ತಿಮುಕ್ತಿಪ್ರದಮೀಶಮೇಕಂ ಶ್ರೀನಾಗನಾಥಂ ಶರಣಂ ಪ್ರಪದ್ಯೇ ॥
ಸಾನಂದಮಾನಂದವನೇ ವಸಂತಂ ಆನಂದಕಂದಂ ಹತಪಾಪಬೃಂದಮ್ ।
ವಾರಾಣಸೀನಾಥಮನಾಥನಾಥಂ ಶ್ರೀವಿಶ್ವನಾಥಂ ಶರಣಂ ಪ್ರಪದ್ಯೇ ॥
ಸಹ್ಯಾದ್ರಿಶೀರ್ಷೇ ವಿಮಲೇ ವಸಂತಂ ಗೋದಾವರಿತೀರಪವಿತ್ರದೇಶೇ ।
ಯದ್ದರ್ಶನಾತ್ ಪಾತಕಂ ಪಾಶು ನಾಶಂ ಪ್ರಯಾತಿ ತಂ ತ್ರ್ಯಂಬಕಮೀಶಮೀಡೇ ॥
ಮಹಾದ್ರಿಪಾರ್ಶ್ವೇ ಚ ತಟೇರಮಂತಂ ಸಂಪೂಜ್ಯಮಾನಂ ಸತತಂ ಮುನೀಂದ್ರೈಃ।
ಸುರಾಸುರೈರ್ಯಕ್ಷ ಮಹೋರಗಾಢ್ಯೈಃ ಕೇದಾರಮೀಶಂ ಶಿವಮೇಕಮೀಡೇ ॥
ಇಲಾಪುರೇ ರಮ್ಯವಿಶಾಲಕೇಽಸ್ಮಿನ್ ಸಮುಲ್ಲಸಂತಂ ಚ ಜಗದ್ವರೇಣ್ಯಮ್ ।
ವಂದೇ ಮಹೋದಾರತರಸ್ವಭಾವಂ ಘೃಷ್ಣೇಶ್ವರಾಖ್ಯಂ ಶರಣಂ ಪ್ರಪದ್ಯೇ ॥
ಜ್ಯೋತಿರ್ಮಯದ್ವಾದಶಲಿಂಗಕಾನಾಂ ಶಿವಾತ್ಮನಾಂ ಪ್ರೋಕ್ತಮಿದಂ ಕ್ರಮೇಣ ।
ಸ್ತೋತ್ರಂ ಪಠಿತ್ವಾ ಮನುಜೋಽತಿಭಕ್ತ್ಯಾ ಫಲಂ ತದಾಲೋಕ್ಯ ನಿಜಂ ಭಜೇಚ್ಚ ॥

॥ ಶ್ರೀಪರಮೇಶ್ವರಾರ್ಪಣಮಸ್ತು ॥









